# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಹಿರಿಯೂರು.

## ಸಿ.ಸಿ ನಂಃ 1299/2020

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಪಿ.ಕೆ. ಇಬ್ರಾಹೀಂ ಖಲೀಲ್ | ಸಿಡಬ್ಲ್ಯೂ-8 |
| ತಂದೆಯ/ಗಂಡನ ಹೆಸರು | - | ಖಲಂದರ್ ಸಾಬ್ | ಪಿಡಬ್ಲ್ಯೂ-5 |
| ವಯಸ್ಸು | - | 46 ವರ್ಷ | ಪ್ರ.ವ.ಬೋ ದಿನಾಂಕಃ20.09.2024 |
| ಉದ್ಯೋಗ | - | ಮುಖ್ಯ ಪೇದೆ, ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆ | |
| ವಾಸ | - | ಹಿರಿಯೂರು. | |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ಯವರಿಂದಃ-**

ನಾನು 2015 ರಿಂದ 2022 ರವರೆಗೆ ಹಿರಿಯೂರು ನಗರ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕೆಲಸ ನಿರ್ವಹಿಸಿರುತ್ತೇನೆ.

ದಿನಾಂಕಃ26.01.2020 ರಂದು ನಾನು ಪೊಲೀಸ್ ಠಾಣೆ ಪ್ರಭಾರದಲ್ಲಿದ್ದಾಗ ಸಂಜೆ 4.30 ಗಂಟೆಗೆ ಹಿರಿಯೂರು ಸರ್ಕಾರಿ ಆಸ್ಪತ್ರೆಯಿಂದ ಹಲ್ಲೆಯ ಪ್ರಕರಣದಲ್ಲಿ ಗಾಯಾಳು ಆಸ್ಪತ್ರೆಗೆ ದಾಖಲಾಗಿರುತ್ತಾರೆ ಎಂದು ಫೋನ್ ಮಾಡಿರುತ್ತಾರೆ. ಆಗ ನಾನು ಆಸ್ಪತ್ರೆಗೆ ಹೋಗಿ ಮೆಮೋ ಸ್ವೀಕರಿಸಿ ಚಾಸಾ-1 ರವರನ್ನು ವಿಚಾರಿಸಿ ಅವರಿಂದ ನಿಪಿ-1 ರಂತೆ ಹೇಳಿಕೆ ದೂರನ್ನು ಪಡೆದಿರುತ್ತೇನೆ. ನಂತರ ಸಂಜೆ 5.00 ಗಂಟೆಗೆ ಠಾಣೆಗೆ ಬಂದು ದೂರಿನ ಅಂಶಗಳಲ್ಲಿ ಅಸಂಜ್ಞೇಯ ಅಪರಾಧಗಳ ಮಾಹಿತಿ ಇದ್ದ ಕಾರಣ ಅದನ್ನು ಎನ್.ಸಿ. ಸಂಖ್ಯೆ:8/2020 ರಲ್ಲಿ ದಾಖಲಿಸಿರುತ್ತೇನೆ. ಸದರಿ ಎನ್.ಸಿ.ಯನ್ನು ಮನವಿ ಪತ್ರದೊಂದಿಗೆ ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಲು ಅನುಮತಿ ಕೋರಿ ಕಳುಹಿಸಿಕೊಟ್ಟಿರುತ್ತೇನೆ. ನ್ಯಾಯಾಲಯದ ಆದೇಶದಂತೆ ಪ್ರಕರಣವನ್ನು ಠಾಣಾ ಮೊಕದ್ದಮೆ ಸಂಖ್ಯೆ:14/2020 ರಂತೆ ಪ್ರಕರಣ

ದಾಖಲು ಮಾಡಿಕೊಂಡಿರುತ್ತೇನೆ. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಎನ್.ಸಿ ಪ್ರಕರಣವನ್ನು **ನಿಪಿ-4** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-4(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯಕ್ಕೆ ಸಲ್ಲಿಸಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ-5** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-5(ಎ)** ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೂ ಮತ್ತು ನಮ್ಮ ಇಲಾಖಾ ಮೇಲಾಧಿಕಾರಿಗಳಿಗೂ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ **ನಿಪಿ-6** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಆಸ್ಪತ್ರೆಯ ಸೂಚನಾ ಪತ್ರವನ್ನು **ನಿಪಿ-7** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-7(ಎ)** ಎಂದು ಗುರುತಿಸಲಾಯಿತು.

ದಿನಾಂಕಃ27.01.2020 ರಂದು ಬೆಳಿಗ್ಗೆ 8.00 ಗಂಟೆಗೆ ಕೃತ್ಯ ಸ್ಥಳವಾದ ಹಿರಿಯೂರು ನಗರದ ಮುಖ್ಯ ರಸ್ತೆಯಲ್ಲಿರುವ ಜ್ಯೂನಿಯರ್ ಕಾಲೇಜು ಮುಂಭಾಗದ ಪಾದಾಚಾರಿ ರಸ್ತೆಗೆ ಭೇಟಿ ನೀಡಿ ಅಲ್ಲಿ ಚಾಸಾ-1 ರವರು ತೋರಿಸಿಕೊಟ್ಟಂತೆ ಪಂಚರಾದ ಚಾಸಾ-5 ಮತ್ತು 6 ರವರ ಸಮಕ್ಷಮ ನಿಪಿ-2 ರಂತೆ ಸ್ಥಳ ಪಂಚನಾಮೆಯನ್ನು ತಯಾರಿಸಿರುತ್ತೇನೆ. ನಿಪಿ-2 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-2(ಬಿ)** ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿನಾಂಕಃ30.01.2020 ರಂದು ಈ ಪ್ರಕರಣದ 1 ಮತ್ತು 2 ನೇ ಆರೋಪಿತರು ಠಾಣೆಗೆ ಹಾಜರಾಗಿದ್ದು ಅವರ ವಿರುದ್ಧ ದಸ್ತಗಿರಿ ನಿಯಮ ಪಾಲಿಸಿ ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದಿನಾಂಕಃ31.01.2020 ರಂದು ಈ ಪ್ರಕರಣದ 3 ನೇ ಆರೋಪಿ ಠಾಣೆಗೆ ಹಾಜರಾಗಿದ್ದು ಅವರ ವಿರುದ್ಧ ದಸ್ತಗಿರಿ ನಿಯಮ ಪಾಲಿಸಿ ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

ದಿನಾಂಕಃ12.02.2020 ರಂದು ಚಾಸಾ-7 ರವರಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ-3 ರಂತೆ ಪಡೆದುಕೊಂಡಿರುತ್ತೇನೆ. ನಿಪಿ-3 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-3(ಬಿ)** ಎಂದು ಗುರುತಿಸಲಾಯಿತು. ಅದೇ ದಿನ ಈ ಪ್ರಕರಣದಲ್ಲಿ ತನಿಖೆ ಮುಕ್ತಾಯಗೊಂಡಿದ್ದು ಆರೋಪಿತರ ವಿರುದ್ಧ ಮೇಲ್ನೋಟಕ್ಕೆ ಆರೋಪ ಸಾಬೀತಾಗಿದ್ದರಿಂದ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ-ಸವಾಲುಃ ಆರೋಪಿತರ ಪರ ಶ್ರೀ ಆರ್.ಬಿ.ಆರ್. ವಕೀಲರಿಂದಃ-**

ಆಸ್ಪತ್ರೆಯಿಂದ ಮಾಹಿತಿ ಬಂದಾಗ ಸಂಜೆ 4.30 ಗಂಟೆಯಾಗಿತ್ತು. ಆಸ್ಪತ್ರೆಗೆ ಹೋದಾಗ 4.35 ಗಂಟೆಯಾಗಿತ್ತು. ನಿಪಿ-1 ಹೇಳಿಕೆಯನ್ನು ನಾನೇ ಬರೆದಿರುತ್ತೇನೆ. ಚಾಸಾ-1 ರವರು ನಿಪಿ-1 ರಂತೆ ನನ್ನ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಮಾಹಿತಿಯ ಆಧಾರದ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ದಿನಾಂಕ ಮತ್ತು ಸಮಯ ತಿದ್ದುಪಡಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ದಿನಾಂಕ ತಿದ್ದುಪಡಿ ಮಾಡಿದ್ದು ಅದಕ್ಕೆ ವೈಟ್ ನರ್ ಹಕಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಸಮಯ ಬರೆಯುವಾಗ ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ಪಂಚರಿಗೆ ಪಂಚನಾಮೆಗೆ ಬರಲು ನೋಟೀಸ್ ನೀಡಿರುವುದಿಲ್ಲ. ನಿಪಿ-2 ನ್ನು ಠಾಣೆಯಲ್ಲಿಯೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸರಿಯಾಗಿ ತನಿಖೆ ನಡೆಸದೇ ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.